ಮಧ್ಯೆಯಿದ್ದು, ದ್ವೀಪದಂತೆ ಬದುಕುತ್ತಿರುವವರ ಬಾಳಿನಲ್ಲಿ ಇಂಥ ಕೆಟ್ಟ ಕಮೆಂಟ್‌ಗಳು ಎಂಥ ಕೋಲಾಹಲವನ್ನಾದರೂ ಎಬ್ಬಿಸಬಹುದು. ಸೂಕ್ಷ್ಮಮನಸ್ಥಿತಿಯವರು, ದುಡುಕು ಸ್ವಭಾವದವರು, ಸಾಮಾಜಿಕವಾಗಿ ವಿಮುಖರಾಗಿ ಸಾಮಾಜಿಕ ಜಾಲತಾಣಗಳೇ ಬದುಕು ಎಂದುಕೊಂಡವರಿಗೆ ಈ ಕಮೆಂಟ್‌ಗಳನ್ನು ಅರಗಿಸಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲ.

ಇಂಥದ್ದೊಂದು ಪರಿಸ್ಥಿತಿ ಬಂದಾಗ ಮೊದಲಿಗೆ ಧೈರ್ಯಗೆಡಬೇಡಿ. ಕುಟುಂಬದ ಸದಸ್ಯರು, ಆಪ್ತೇಷ್ಟರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಯಾವೆಲ್ಲ ಕಾರಣಗಳಿಗೆ ಟ್ರೋಲ್ ಆಗುತ್ತಿದೆ ಎಂಬುದನ್ನು ಸಮಗ್ರವಾಗಿ ಗಮನಿಸಲು ಪ್ರಯತ್ನಿಸಿ. ಹಾಗೆಂದು ಅದರಲ್ಲಿಯೇ ದಿನವಿಡಿ ಮುಳುಗಬೇಡಿ. ಒಂದು ಹಂತದವರೆಗೆ ಯಾಕೆ ಹೀಗಾಯ್ತು ಎಂದು ತಿಳಿದುಕೊಂಡ ಮೇಲೆ ಮುಂದಿನ ಹಂತ ಅದರಿಂದ ಹೊರಬರುವುದೇ ಆಗಿರುತ್ತದೆ ಎನ್ನುತ್ತಾರೆ ಮನಶಾಸ್ತ್ರಜ್ಞ ಅಕ್ಷರ ದಾಮ್ಲೆ.

ಸಾಮಾಜಿಕ ಜಾಲತಾಣಗಳಲ್ಲಿ ಟೀಕೆ–ಟಿಪ್ಪಣಿಗಳನ್ನು ಯಾರು ಬೇಕಾದರೂ ಮಾಡಬಹುದು ಎಂಬುದನ್ನು ಸದಾ ಗಮನದಲ್ಲಿಟ್ಟುಕೊಳ್ಳಿ. ಅವರು ನಿಮ್ಮ ಒಳಿತಿಗಾಗಿ ಟೀಕಿಸುವವರಾಗಿರುವುದಿಲ್ಲ. ಹಾಗಿದ್ದರೂ ಅವರ ಟೀಕೆಯಲ್ಲಿ ಏನಾದರೂ ಹುರುಳಿದೆಯೇ? ಎಂಬುದನ್ನು ಅವಲೋಕಿಸಿ. ಸುಧಾರಣೆಗೆ ಅವಕಾಶವಿದ್ದರೆ ಅದನ್ನು ಜಾರಿಗೆ ತರಲು ಪ್ರಯತ್ನಿಸಿ. ಪ್ರತಿಯೊಬ್ಬರಿಗೂ ಉತ್ತರ ಕೊಡುವ ಅಗತ್ಯ ಇರುವುದಿಲ್ಲ. ಆದರೆ, ಎಲ್ಲರಿಗೂ ಅನ್ವಯಿಸುವಂತೆ ಅಭಿಪ್ರಾಯವನ್ನು ಹಂಚಿಕೊಳ್ಳಬಹುದು.

ಇದರಿಂದಾಗುವ ಮಾನಸಿಕ ಆಘಾತದಿಂದ ಹೊರಬರಲು ಪ್ರೀತಿಪಾತ್ರರ, ಆಪ್ತೇಷ್ಟರ, ಮನೋಚಿಕಿತ್ಸಕರ ನೆರವು ಪಡೆಯಬಹುದು. ಕಾಲೆಳೆದರು ಎಂದ ಮಾತ್ರಕ್ಕೆ ಬಲಿಪಶುವಾದೆ ಎಂದು ಅಂದುಕೊಳ್ಳುವ ಬದಲು ನಕಾರಾತ್ಮಕ ಚಿಂತನೆಗಳಿಂದ ಹೊರ ಬರಲು ಧ್ಯಾನ, ಯೋಗದಂಥ ತಂತ್ರಗಳು ಪ್ರಯೋಜನಕಾರಿ ಎನ್ನುವ ಸಲಹೆ ದಾಮ್ಲೆ ಅವರದ್ದು.

ಟ್ರೋಲ್ ಮಾಡುವವರ ಮನಸ್ಥಿತಿಯನ್ನು ನೋಡುವಾಗ ವಿಕೃತಿಯೇ ಪ್ರಮುಖವಾಗಿರುತ್ತದೆ. ಇದನ್ನು ನಾವು ‘ಕ್ರಾಬ್ ಮೆಂಟಾಲಿಟಿ’ ಅಂತಲೂ ಕರೆಯಬಹುದು. ಅಂದರೆ ಇತರರನ್ನು ಕೆಳಗೆ ಎಳೆಯುವುದಕ್ಕೆ ಕಾಯುತ್ತಿರುವಂತಹ ಮತ್ತು ಅವಕಾಶ ಸಿಕ್ಕಾಗಲೆಲ್ಲ ಕೆಳಗೆ ಎಳೆದುಬಿಡುವಂಥ ಒಂದು ಮನಸ್ಥಿತಿ. ಮಾತ್ರವಲ್ಲ ಹಾಗೆ ಟ್ರೋಲ್ ಮಾಡುವ ಮೂಲಕ ತಮ್ಮ ಹೆಚ್ಚುಗಾರಿಕೆಯನ್ನು ತೋರಿಸುವಂತಹ ಪ್ರವೃತ್ತಿಯೂ ಟ್ರೋಲ್ ಮಾಡುವುದಕ್ಕೆ ಕಾರಣ ಎನ್ನುತ್ತಾರೆ ಅವರು.

ನಮ್ಮ ಕೆಟ್ಟ, ಕಟುನುಡಿಯ ಕಮೆಂಟ್ ಯಾರನ್ನೂ ತಿದ್ದುತ್ತದೋ, ಬಿಡುತ್ತದೋ, ನಮ್ಮ ಹಳವಂಡಗಳನ್ನು, ಕೀಳರಿಮೆಯನ್ನು ವ್ಯಕ್ತಿತ್ವದಲ್ಲಿಯೇ ಅಡಗಿರುವ ದೋಷವನ್ನು ಬಹಳ ಸುಲಭವಾಗಿ ಲೋಕದೆದುರಿಗೆ ತೆರೆದಿಡುತ್ತದೆ ಎಂಬ ಪರಿಜ್ಞಾನವಂತೂ ಇಟ್ಟುಕೊಂಡೇ ಬರೆಯೋಣ. ಬಿದ್ದವರ ಮೇಲೆ ಆಳಿಗೊಂದು ಕಮೆಂಟ್ ಹಾಕುವ ಮುನ್ನ ಯೋಚಿಸಿ; ಅವರೂ ನಮ್ಮ ನಿಮ್ಮಂತೆ ಮನುಷ್ಯರೆಂದು! ■



# ನಟಿ ಹನಿ ರೋಸ್ ಪ್ರಕರಣ

ಈಚೆಗೆ ಮಲೆಯಾಳಂ ನಟಿ ಹನಿ ರೋಸ್ ಕೂಡ ಇಂಥದ್ದೇ ಪ್ರಕರಣದ ಸಂಬಂಧ ದೂರು ದಾಖಲಿಸಿದ್ದರು. ತಮ್ಮ ವಿರುದ್ಧ ಯೂಟ್ಯೂಬ್ ಸೇರಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಮಾನಹಾನಿ, ಲೈಂಗಿಕ ಕಿರುಕುಳ, ಅಶ್ಲೀಲ ಕಮೆಂಟ್ ಮಾಡುವ 20 ಯೂಟ್ಯೂಬ್ ಚಾನಲ್‌ಗಳ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದರು.

ಈ 20 ಯೂಟ್ಯೂಬ್ ಚಾನಲ್‌ಗಳು ಹನಿ ರೋಸ್ ಬಗ್ಗೆ ಪ್ರಚೋದನಕಾರಿ ಹಾಗೂ ಮಾನಹಾನಿ ಮಾಡುವಂತೆ ಚಿತ್ರ, ವಿಡಿಯೊಗಳನ್ನು ತಿರುಚಿ ಹಾಕಿದ್ದಲ್ಲದೇ ತಪ್ಪು ಮಾಹಿತಿಯನ್ನು ಕೊಟ್ಟು ಜನಸಾಮಾನ್ಯರ ದಾರಿ ತಪ್ಪಿಸಿದ್ದಾರೆ ಎಂದು ರೋಸ್ ಆರೋಪಿಸಿದ್ದರು.

ಜೊತೆಗೆ, ಚೆಮ್ಮನೂರು ಜ್ಯುವೆಲರ್ಸ್‌ನ ಬಾಬಿ ಚೆಮ್ಮನೂರ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಹನಿ ರೋಸ್ ದೂರಿದ್ದರು. ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಆಹ್ವಾನವನ್ನು ನಿರಾಕರಿಸಿದ ಕಾರಣವಾಗಿ ಈ ರೀತಿ ಅಗೌರವವಾಗಿ ಕಮೆಂಟ್ ಮಾಡುತ್ತಿದ್ದಾರೆ ಎಂದು ಆರೋಪ ಮಾಡಿದ್ದರು. ಈ ಸಂಬಂಧ ಬಾಬಿ ಅವರ ಬಂಧನವೂ ಆಗಿತ್ತು. ಈ ಘಟನೆಗೆ ಕೆಲ ದಿನಗಳ ಮೊದಲು ಫೇಸ್‌ಬುಕ್ ಪುಟದಲ್ಲಿಯೂ ಕೆಲವು ಕಿಡಿಗೇಡಿಗಳು ಅಶ್ಲೀಲ ಕಾಮೆಂಟ್‌ಗಳನ್ನು ಮಾಡುತ್ತಿದ್ದಾರೆ ಎಂದು ದೂರು ದಾಖಲಿಸಿದ್ದರು.

ಪ್ರಕರಣ ಸಂಬಂಧ ಪಣಂಗಾಡು ಮೂಲದ 60 ವರ್ಷದ ಶಾಜಿ ಎಂಬುವರನ್ನು ಬಂಧಿಸಲಾಗಿತ್ತು. ಉಳಿದ ಎಲ್ಲಾ ಆರೋಪಿಗಳ ವಿರುದ್ಧ ಐಟಿ ಕಾಯ್ದೆಯ ಸೆಕ್ಷನ್ 75 ಮತ್ತು ಸೆಕ್ಷನ್ 67 ಸೇರಿದಂತೆ ಬಿಎನ್‌ಎಸ್‌ನ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಈ ಪ್ರಕರಣದಲ್ಲಿ ಕೂಡ ಕೆಲವರು ಹನಿ ರೋಸ್ ಅವರು ಉಡುಪು ಧರಿಸಿರುವ ರೀತಿಯೇ ಈ ಕಮೆಂಟ್‌ಗಳಿಗೆ ಕಾರಣ ಎಂದು ನಿಂದಿಸಿದ್ದರು.

30ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿರುವ ನಟಿ, ರೂಪದರ್ಶಿ ಹನಿ ರೋಸ್; ಕನ್ನಡದ ‘ಅಜಂತಾ’ ಹಾಗೂ ‘ನಂಜನಗೂಡು ನಂಜುಂಡ’ ಎಂಬ ಸಿನಿಮಾಗಳಲ್ಲಿ ಅಭಿನಯಿಸಿದ್ದಾರೆ. ತಮಿಳು, ತೆಲುಗು ಸಿನಿಮಾಗಳಲ್ಲಿಯೂ ನಟಿಸಿದ್ದಾರೆ.



ಚಿತ್ರ: ಇನ್‌ಸ್ಟಾಗ್ರಾಂ ಖಾತೆಯಿಂದ